ಕೌಶಲಪೂರ್ಣ | ಒಳಗೊಳ್ಳುವಿಕೆಯ ಶಿಕ್ಷಣವು ಎಲ್ಲರಿಗೂ ಶಾಲಾಶಿಕ್ಷಣವನ್ನು ಒದಗಿಸುವುದೇ?

ವಿ. ಶಾಂತಕುಮಾರ್

ಶಾಲಾ ಶಿಕ್ಷಣದಲ್ಲಿ ಕೌಶಲಗಳ ಅಸಮರ್ಪಕ ಸೇರ್ಪಡೆ ಅಪಾಯಕಾರಿ ಎಂಬ ತಪ್ಪು ಗ್ರಹಿಕೆ ಹೆಚ್ಚಿನ ಪೋಷಕರಿಗಿದೆ. ಏಕೆಂದರೆ ಅದರಿಂದ ಹಲವಾರು ಮಕ್ಕಳು (ಅಥವಾ ಅವರ ಪೋಷಕರು) ಶಾಲಾ ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ, ಮಕ್ಕಳು ತಮ್ಮ ಪೋಷಕರು ಅಥವಾ ಸಮುದಾಯದ ಸಾಂಪ್ರದಾಯಿಕ ಕೌಶಲಗಳನ್ನು ಮರೆಯುವಂತೆ ಮಾಡುತ್ತದೆ, ಅಲ್ಲದೆ, ಭಾರತದಲ್ಲಿ ಶಿಕ್ಷಣ ಮುಗಿಸಿದ ವಯಸ್ಕರಿಗೆ ಬೃಹತ್ ಪ್ರಮಾಣದಲ್ಲಿ ನಿರುದ್ಯೋಗ ಸೃಷ್ಟಿಯಾಗಲು ಅದು ಕಾರಣವಾಗುತ್ತದೆ ಎಂದು ಅವರು ನಂಬಿದ್ದಾರೆ. ಇದೊಂದು ಸಂಕೀರ್ಣ ಸಮಸ್ಯೆಯಾಗಿದ್ದು, ಇದನ್ನು ಅರ್ಥ ಮಾಡಿಕೊಳ್ಳಬೇಕಾದರೆ ಐತಿಹಾಸಿಕ ಮತ್ತು ಭಾರತವನ್ನೂ ಒಳಗೊಂಡಂತೆ ಅಂತರರಾಷ್ಟ್ರೀಯ ಅನುಭವಗಳನ್ನು ನಾವು ಗಮನಿಸಬೇಕಾಗುತ್ತದೆ.

ವಸಾಹತುಶಾಹಿ ಶಿಕ್ಷಣ

ಭಾರತದಲ್ಲಿ ಬಗೆಬಗೆಯ ಕೌಶಲಗಳ ಕಲಿಕೆಯನ್ನು ಒಳಗೊಳ್ಳದೆ ಸಾಮಾನ್ಯ ಉದ್ದೇಶದ ಶಾಲಾ ಶಿಕ್ಷಣ ಪದ್ಧತಿ ಆರಂಭಿಸಿದ್ದರ ಬಗ್ಗೆ ಬ್ರಿಟಿಷ್ ವಸಾಹತುಶಾಹಿಯನ್ನು ಬಹಳ ಮಂದಿ ದೂರಿದ್ದರು. ವಸಾಹತುಶಾಹಿ ಆಡಳಿತದ ಈ ತೀರ್ಮಾನಕ್ಕೆ ಒಂದು ಬಲವಾದ ಕಾರಣವಿತ್ತು. ಭಾರತಕ್ಕಾಗಿ ಶಿಕ್ಷಣ ವ್ಯವಸ್ಥೆಯ ವಿನ್ಯಾಸ ರಚಿಸುವ ವೇಳೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ (ಬ್ರಿಟನ್/ಗ್ರೇಟರ್ ಬ್ರಿಟನ್) ಒಂದು ಚರ್ಚೆ ನಡೆದಿತ್ತು. ಅದುವರೆಗೂ ಎರಡು ಬಗೆಯ ಶಾಲಾ ವ್ಯವಸ್ಥೆಗಳಿದ್ದವು. ಒಂದು-ಶ್ರೀಮಂತರಿಂದ ಪೋಷಿಸಲ್ಪಟ್ಟ ಸಾಮಾನ್ಯ ವಿದ್ಯಾಭ್ಯಾಸ ವ್ಯವಸ್ಥೆ, ಎರಡು- ಬಡ ಕುಟುಂಬದ ಮಕ್ಕಳಿಗಾಗಿ 'ಅಭ್ಯಾಸಾವಧಿಗಳು' (ಅಪ್ರೆಂಟಿಸ್‌ಶಿಪ್). ಅಂತಹ ದ್ವಂದ್ವ ಶಿಕ್ಷಣ ವ್ಯವಸ್ಥೆಯ ಸಾಮಾಜಿಕ ತೊಡಕುಗಳ ಬಗ್ಗೆ ಕಳವಳಗಳಿದ್ದವು. ಈ ಅಸಮಾನತೆ ಬಗ್ಗೆ ಕಳವಳ ಹೊಂದಿದ್ದವರು, ಸಾರ್ವತ್ರಿಕ ಉದ್ದೇಶದ ವಿದ್ಯಾಭ್ಯಾಸವನ್ನು ಒಂದಷ್ಟು ವರ್ಷಗಳವರೆಗೆ ಎಲ್ಲಾ ಮಕ್ಕಳಿಗೂ ವಿಸ್ತರಿಸುವಂತೆ ವಾದಿಸುತ್ತಿದ್ದರು. ಯು.ಕೆ.ಯಲ್ಲಿ ಆದ ಈ ಬದಲಾವಣೆಯೇ ಭಾರತದಲ್ಲಿ ವಸಾಹತುಶಾಹಿ ಶಿಕ್ಷಣದ ಮೇಲೆ ಪ್ರಭಾವ ಬೀರಿತು.

ಗಾಂಧೀಜಿಯ ವಿಧಾನ

ವಸಾಹತುಶಾಹಿ ಶಿಕ್ಷಣಕ್ಕೆ ಮಹಾತ್ಮಾ ಗಾಂಧೀಜಿಯ ವಿರೋಧವಿತ್ತು ಮತ್ತು ಆಗಿನ ಕಾಲದಲ್ಲಿ ಬಹುಸಂಖ್ಯಾತ ಭಾರತೀಯರ ಜೀವನೋಪಾಯದ ಜೊತೆಗೆ ಆ ಶಿಕ್ಷಣ ಪದ್ಧತಿ ಸಂಪರ್ಕ ಕಡಿತಗೊಳಿಸುತ್ತಿತ್ತು ಎಂಬುದು ಅವರ ಒಂದು ಕಾರಣವಾಗಿತ್ತು ಹಾಗೂ ನಯೀ ತಾಲೀಮ್ ಎಂಬ, ಕೃಷಿ ಮತ್ತು ಕುಶಲಕರ್ಮಿ ಕೌಶಲಗಳನ್ನು ಶಿಕ್ಷಣದ ಭಾಗವಾಗಿ ಸೇರಿಸುವ ಪರಿಕಲ್ಪನೆ ಅವರದ್ದಾಗಿತ್ತು. ಆದರೆ ತಮಿಳುನಾಡಿನ ದ್ರಾವಿಡ ಕಳಗಮ್(ಡಿ.ಕೆ.)ನಂಥ ಕೆಲ ನಿರ್ದಿಷ್ಟ ವರ್ಗದ ನಾಯಕರು ಇದನ್ನು ವಿರೋಧಿಸಿದ್ದರು. ಅದರ ಜಾರಿಯು ಜಾತಿ ವ್ಯವಸ್ಥೆಯ ನಿರಂತರತೆಗೆ ಕಾರಣವಾದೀತು ಎಂಬುದು ಅವರ ಕಳವಳವಾಗಿತ್ತು.

ಜವಾಹರಲಾಲ್ ನೆಹರೂ ಅವರಂತಹ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಇಂಡಿಯನ್ ನ್ಯಾಷನಲ್ ಕಾಂಗ್ರೆಸ್)ನ ಉದಾರ-ವಾದಿಗಳಿಗೆ ಗಾಂಧೀಜಿಯ ವಿಧಾನದ ಬಗ್ಗೆ ಮಹತ್ವಾಕಾಂಕ್ಷೆ ಇರಲಿಲ್ಲವಾದರೂ ಸ್ವಾತಂತ್ರ್ಯೋತ್ತರ ಭಾರತದ ಸರ್ಕಾರಗಳು ನಯೀ ತಾಲೀಮ್ ಪರಿಕಲ್ಪನೆಯ ಶಾಲೆಗಳನ್ನು ಬೆಂಬಲಿಸಿದ್ದವು. ಆದಾಗ್ಯೂ, ಕೆಲವು ದಶಕಗಳ ಬಳಿಕ ಈ ಪರಿಕಲ್ಪನೆಯ ಅನೇಕ ಶಾಲೆಗಳು ಮುಖ್ಯವಾಹಿನಿ ಶಿಕ್ಷಣವನ್ನು ಒದಗಿಸಿದ್ದವು.

ಇದಕ್ಕೆ ಒಂದು ಬಹುಮುಖ್ಯವಾದ ಕಾರಣವಿತ್ತು. ಬಹಳಷ್ಟು ರೈತರು ಮತ್ತು ಕುಶಲಕರ್ಮಿಗಳು, ಕೃಷಿ ಮತ್ತು ಕುಶಲಕರ್ಮಿ ಕೌಶಲಗಳನ್ನು ಹೇಳಿಕೊಡುತ್ತಿದ್ದ ಈ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸಲಿಲ್ಲ. ತಮ್ಮ ಮಕ್ಕಳು ಹೆತ್ತವರ ಕೆಲಸದಲ್ಲಿ ಸಹಾಯ ಮಾಡುತ್ತಲೇ ಈ ಕೌಶಲಗಳನ್ನು ಚೆನ್ನಾಗಿ ಕಲಿಯ-ಬಲ್ಲರು. ಅಲ್ಲದೆ, ಅದಕ್ಕಾಗಿ ಶಾಲಾ ಕಲಿಕೆಗಾಗಿ ಪ್ರತ್ಯೇಕ ಸಮಯವನ್ನು ಮೀಸಲಿಡಬೇಕಾಗಿಲ್ಲ ಎಂದು ಅವರು ನಂಬಿದ್ದರು. ಒಂದಂತೂ ಸ್ಪಷ್ಟವಾಗಿತ್ತು, ಏನೆಂದರೆ, ಬಡವರು ಮಾತ್ರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಒಲವು ತೋರುತ್ತಿದ್ದರು. ಅವರ ಪ್ರಕಾರ, ಶಿಕ್ಷಣದ ಮೂಲಕ ಉತ್ತಮ ಜೀವನ ಸಾಗಿಸಲು ಸಾಧ್ಯವಾಗಿತ್ತು.

ಇತರ ದೇಶಗಳಲ್ಲಿ ವೃತ್ತಿಪರ ಕೌಶಲಗಳು

ಯುರೋಪ್

ಜರ್ಮನಿಯಲ್ಲಿ ಮಾತ್ರ ಮಕ್ಕಳ ಪ್ರೌಢ ಶಾಲಾ ಶಿಕ್ಷಣವನ್ನು ವೃತ್ತಿಪರ ಶಿಕ್ಷಣ ವಿಭಾಗವನ್ನಾಗಿ ಮಾರ್ಪಾಡು ಮಾಡಲಾಗಿತ್ತು. ಬಹುತೇಕ ಜರ್ಮನ್ನರು, ಕಾರು ತಯಾರಿಕಾ ಕಾರ್ಖಾನೆ ಮತ್ತು ಅಂತಹ ಇಂಜಿನಿಯರಿಂಗ್ ಉತ್ಪನ್ನಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ನೌಕರಿ ಹೊಂದಿದವರೆಲ್ಲ ಇಂತಹ ವೃತ್ತಿಪರ ಶಿಕ್ಷಣ ಪಡೆದವರೇ ಆಗಿರುತ್ತಿದ್ದರು. ಜರ್ಮನಿಯ ವಿಚಾರದಲ್ಲಿ ಎರಡು ಪ್ರಮುಖ ಸಂಗತಿಗಳನ್ನು ಪರಿಗಣಿಸಬೇಕು – ಮೊದಲನೆಯದಾಗಿ ಕೈಗಾರಿಕೀಕರಣದಿಂದಾಗಿ ಯಾರು ಈ ವೃತ್ತಿಪರ ಶಿಕ್ಷಣ ಪಡೆದಿದ್ದರೋ ಅವರೆಲ್ಲರೂ ಉತ್ತಮ ವೇತನವುಳ್ಳ ಉದ್ಯೋಗ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಹೊಂದಿರುತ್ತಿದ್ದರು. ಎರಡನೆಯದಾಗಿ, ಶಾಲೆಗಳು ಮಕ್ಕಳನ್ನು ವೃತ್ತಿಪರ ಮತ್ತು ಸಾಮಾನ್ಯ ವರ್ಗಗಳು (ಇದರಲ್ಲಿ ಉನ್ನತ ವರ್ಗದ ಮಕ್ಕಳು ವಿಶ್ವವಿದ್ಯಾಲಯಗಳಿಗೆ ಸೇರುತ್ತಿದ್ದರು) ಎಂದು ವಿಂಗಡಿಸುತ್ತಿದ್ದರು. ಹಾಗಾಗಿ, ಪೋಷಕರ ಸಮಾಜೋ ಆರ್ಥಿಕ ಸ್ಥಿತಿಗತಿ ಈ ಆಯ್ಕೆಯನ್ನು ಪ್ರಭಾವಿಸುತ್ತಿರಲಿಲ್ಲ.

ಇಟಲಿಯಲ್ಲಿಯೂ ಮಕ್ಕಳು ಪ್ರೌಢ ಶಿಕ್ಷಣದ ಹಂತದಲ್ಲಿ ವೃತ್ತಿಪರ ಶಿಕ್ಷಣವನ್ನು ಆರಿಸಿಕೊಳ್ಳುವ ಅವಕಾಶವಿದ್ದರೂ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿತ್ತು. ಇಟಲಿಯಲ್ಲಿ, ಮಕ್ಕಳು ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ನಿರ್ಧರಿಸುವಲ್ಲಿ ಪೋಷಕರ ಪಾತ್ರ ಮಹತ್ವದ್ದಾಗಿತ್ತು. ದುಡಿಯುವ ವರ್ಗದ ಪೋಷಕರು ತಮ್ಮ

ಮಕ್ಕಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಮೊದಲ ಆದ್ಯತೆಯಾಗಿ ವೃತ್ತಿಪರ ಶಿಕ್ಷಣಕ್ಕೆ ಸೇರಿಸುತ್ತಿದ್ದರು. ಅಲ್ಲದೆ, ತಮ್ಮ ಮಕ್ಕಳು ಸಾಮಾನ್ಯ ವಿಭಾಗಕ್ಕೆ ಸೇರಿ ಮುಂದೆ ವಿಶ್ವವಿದ್ಯಾಲಯದಲ್ಲಿ ಓದುವ ಆಸಕ್ತಿ, ಸಾಮರ್ಥ್ಯ ಹೊಂದಿದ್ದರೂ ಅದನ್ನು ಲೆಕ್ಕಿಸದೆ ಅವರು ವೃತ್ತಿಪರ ಶಿಕ್ಷಣವನ್ನೇ ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸುತ್ತಿದ್ದರು. ಇಟಲಿಯಲ್ಲಿ ಅಸಮಾನತೆ ಮತ್ತು ವರ್ಗಭೇದ ಬೆಳೆಯಲು ಇದು ಪ್ರಮುಖ ಕಾರಣವಾಗಿರಬಹುದು.

ಯು.ಕೆ. ಮತ್ತು ಅಮೆರಿಕ

ಇನ್ನೊಂದೆಡೆ, ಯು.ಕೆ. ಮತ್ತು ಅದರ ಪ್ರಭಾವದಿಂದಾಗಿ ಅಮೆರಿಕದಲ್ಲಿಯೂ ಎಲ್ಲಾ ಮಕ್ಕಳಿಗೆ 12 ವರ್ಷಗಳ ಕಾಲ ಸಾಮಾನ್ಯ ವಿಭಾಗದ ಶಿಕ್ಷಣವನ್ನೇ ಒದಗಿಸಲಾಯಿತು. ಇದರಿಂದ ಅನುಕೂಲ ಮತ್ತು ಅನನುಕೂಲ ಎರಡೂ ಇವೆ. ಸಮಾಜೋ ಆರ್ಥಿಕ ಹಿನ್ನೆಲೆಯ ಭೇದವಿಲ್ಲದೆ ಎಲ್ಲಾ ಮಕ್ಕಳಿಗೂ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣ ಪಡೆಯುವ ಆಯ್ಕೆಯನ್ನೇ ತಡೆಹಿಡಿದಂತಾಯಿತು. ಆದಾಗ್ಯೂ, ಎಷ್ಟೋ ವಿದ್ಯಾರ್ಥಿಗಳು ಆಸಕ್ತಿ ಇಲ್ಲದೆಯೋ ಅಥವಾ ಇತರ ಕಾರಣಗಳಿಂದಲೋ ಅಂತಹ ಶಿಕ್ಷಣ ಪಡೆಯದೇ ಇದ್ದರೆ ಉನ್ನತ ಶಿಕ್ಷಣಕ್ಕಾಗಿ ಒಂದಷ್ಟು ವರ್ಷಗಳನ್ನು ವ್ಯರ್ಥಮಾಡುವುದುಂಟು. ಅದಕ್ಕಿಂತ ಅವರು ಯಾವುದಾದರೂ ಉಪಯುಕ್ತವಾದ ವೃತ್ತಿ ಅಥವಾ ಕೌಶಲಕ್ಕಾಗಿ ಆ ಅವಧಿಯನ್ನು ವಿನಿಯೋಗಿಸಬಹುದಿತ್ತು. ಇಷ್ಟಾದರೂ 12 ವರ್ಷಗಳ ಸಾರ್ವತ್ರಿಕ ಉದ್ದೇಶದ ಶಾಲಾ ಕಲಿಕೆಯ ನಂತರ ಪಾಲಿಟೆಕ್ನಿಕ್ ಅಥವಾ ಸಮುದಾಯ ಕಾಲೇಜುಗಳಲ್ಲಿ ಕೌಶಲವು ಲಭ್ಯವಿದೆ.

ಕೆಲವು ಪ್ರಯೋಗಗಳು

ಇತರ ಕೆಲವು ಆಸಕ್ತಿದಾಯಕ ಪ್ರಯೋಗಗಳನ್ನು ಇಲ್ಲಿ ಪ್ರಸ್ತಾಪಿಸ-ಬೇಕು. 19ನೇ ಶತಮಾನದ ಕೊನೆಯ ವೇಳೆಗೆ ಟ್ರಾವಂಕೂರ್‌ನ ರಾಜಪ್ರಭುತ್ವವು ರೈತರ ಮಕ್ಕಳಿಗಾಗಿ ಒಂದು ಶಾಲೆಯನ್ನು ತೆರೆಯಲು ತೀರ್ಮಾನಿಸಿತು. ರೈತರೂ ಮಾಹಿತಿಯ ತಿಳುವಳಿಕೆ ಹೊಂದಬೇಕು ಎಂಬುದು ಅದರ ಉದ್ದೇಶವಾಗಿತ್ತು. ಆದರೆ, ಕೋರ್ಸ್ ಮುಗಿದ ಬಳಿಕ ಯಾವ ವಿದ್ಯಾರ್ಥಿಯೂ ಕೃಷಿಯತ್ತ ಮರಳಲು ಬಯಸಲಿಲ್ಲ. ಬದಲಿಗೆ ಅವರೆಲ್ಲ ಸರ್ಕಾರಿ ನೌಕರಿ ಬೇಕು ಎಂದು ಪಟ್ಟುಹಿಡಿದರು.

ಮೀನುಗಾರರ ಮಕ್ಕಳಿಗಾಗಿಯೇ ಶಾಲೆ ತೆರೆಯುವ ಪ್ರಯತ್ನಗಳು ಮುಖ್ಯವಾಗಿ ಕೇರಳ, ಬ್ರೆಜಿಲ್ ಮತ್ತು ಇಂಡೊನೇಷ್ಯಾದಲ್ಲಿ ಸೇರಿದಂತೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ನಡೆದಿದ್ದವು. ಮೀನುಗಾರ ಕುಟುಂಬಗಳಲ್ಲಿ ನಿಯಮಿತವಾದ ಮುಖ್ಯವಾಹಿನಿ ಶಿಕ್ಷಣಕ್ಕೆ ವಾತಾವರಣದ ಅನುಕೂಲಕರ ವಾತಾವರಣ ಇಲ್ಲದ ಕಾರಣಕ್ಕೆ ಕೆಲವು ಪ್ರಕರಣಗಳಲ್ಲಿ ಆ ಮಕ್ಕಳಿಗೆ ಮುಖ್ಯವಾಹಿನಿಯ ಶಿಕ್ಷಣ ದೊರಕಿದುದು ಉಪಯುಕ್ತವಾಯಿತು. ಆ ಪೈಕಿ ಕೆಲವರು ಮತ್ಸ್ಯೋದ್ಯಮ ಬಿಟ್ಟು ಬೇರೆ ನೌಕರಿ ಹಿಡಿದಿದ್ದುಂಟು. ಆದರೂ, ತರಬೇತಿ ಪಡೆದ ಮೀನುಗಾರರನ್ನು ರೂಪಿಸಬೇಕು ಎಂಬ, ಈ ಶಾಲೆಯ ಮೂಲ ಉದ್ದೇಶ ಹೆಚ್ಚಿನ ಸಂದರ್ಭಗಳಲ್ಲಿ ಈಡೇರಲೇ ಇಲ್ಲ. ಸಮುದ್ರ ಮೀನುಗಾರಿಕೆಯು ಸಣ್ಣ ಪ್ರಮಾಣದಲ್ಲಿ (ಜಗತ್ತಿನ ಬಹುತೇಕ ಭಾಗಗಳಲ್ಲಿ ಮೀನುಗಾರಿಕೆ ಇದೇ ರೀತಿ ಮುಂದುವರಿದಿದೆ) ಮುಂದುವರಿದರೆ, ಆಗ ಶಾಲೆಗೆ ಹೋಗುವ ವಯಸ್ಸಿನ ಹುಡುಗರು ಶಾಲೆಗೆ ಹೋಗುವುದನ್ನು ತಡೆದು ಬೇಗನೆ ಮೀನುಗಾರಿಕೆ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ.

ನಾವು ಇನ್ನೊಂದು ಸನ್ನಿವೇಶವನ್ನು ಪರಿಗಣಿಸೋಣ. ಚೀನಾ, ವಿಯೆಟ್ನಾಂ, ಥಾಯ್ಲೆಂಡ್ ಹಾಗೂ ಸ್ವಲ್ಪಮಟ್ಟಿಗೆ ಇಂಡೊನೇಷ್ಯಾ-ದಂತಹ ದೇಶಗಳು ಉತ್ಪಾದನಾ ವಲಯದ ಕಾರ್ಖಾನೆಗಳಲ್ಲಿ ಉದ್ಯೋಗ ಸೃಷ್ಟಿ ಮಾಡುವ ನಿಟ್ಟಿನಲ್ಲಿ ಭಾರತಕ್ಕಿಂತ ಎಷ್ಟೋ ಪಾಲು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಈ ದೇಶಗಳಲ್ಲಿ ಮಿಲಿಯಗಟ್ಟಲೆ ಕಾರ್ಖಾನೆ ಕಾರ್ಮಿಕರಿದ್ದಾರೆ. ಈ ಕೆಲಸಗಾರರು ಯಾರು? ಅವರೆಲ್ಲ ಶಾಲಾ ಶಿಕ್ಷಣದ ಭಾಗವಾಗಿ ನಿಗದಿತ ಕೌಶಲಗಳನ್ನು ಪಡೆದಿದ್ದಾರೆಯೇ? ಈ ಎಲ್ಲಾ ದೇಶಗಳಲ್ಲಿ, ನಿಯಮಿತ ಶಾಲಾ ಶಿಕ್ಷಣ ಮುಗಿಸಿದ ಹುಡುಗರು ಮತ್ತು ಹುಡುಗಿಯರು ನಗರಗಳಿಗೆ ಹೋಗಿ ಮೊಬೈಲ್ ಫೋನ್, ಆಟಿಕೆಗಳು, ಲ್ಯಾಪ್‌ಟಾಪ್ ಮುಂತಾದವುಗಳನ್ನು ಜೋಡಿಸುವ ಅಥವಾ ಉಡುಪುಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಕೆಲಸ ಮಾಡತೊಡಗುತ್ತಾರೆ. ಆಯಾ ಕಾರ್ಖಾನೆಗಳಲ್ಲೇ ಅವರು ಮುಂದೆ ನಿರ್ವಹಿಸಬೇಕಾದ ಕೆಲಸಗಳಿಗೆ ತಕ್ಕಂತೆ ಕೆಲವು ತಿಂಗಳ ತರಬೇತಿಯನ್ನೂ ನೀಡಲಾಗುತ್ತದೆ.

ನಾವು ನೆರೆಯ ದೇಶ ಬಾಂಗ್ಲಾದೇಶವನ್ನು ನೋಡಿದರೆ, ಶೇಕಡಾ 60ರಷ್ಟು ವಯಸ್ಕ ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ. (ಭಾರತದಲ್ಲಿ ಈ ಪ್ರಮಾಣ ಕೇವಲ ಶೇಕಡಾ 30ಕ್ಕಿಂತಲೂ ಕಡಿಮೆ ಇದೆ). ಬಾಂಗ್ಲಾದೇಶದಲ್ಲಿನ ಈ ಉದ್ಯೋಗವು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಸಿದ್ಧ ಉಡುಪನ್ನು ರಫ್ತು ಮಾಡುವ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಇದೆ ಎಂಬುವುದು ಗಮನಾರ್ಹ. ಈ ಕೆಲಸಗಾರರು ಶಾಲಾ ಶಿಕ್ಷಣ ಮುಗಿಸಿದ ಕೆಲವೇ ವರ್ಷಗಳಲ್ಲಿ ಕಾರ್ಖಾನೆಗೆ ಬಂದುಬಿಡುತ್ತಾರೆ, ಕೆಲವೊಮ್ಮೆ ಶಾಲಾ ಶಿಕ್ಷಣವನ್ನು ಮುಗಿಸುತ್ತಲೇ ಬರುತ್ತಾರೆ. ಆದರೆ ಆ ಶಾಲೆಗಳಲ್ಲಿ ಕಲಿಯುವ ಕೌಶಲಗಳು ಭಾರತದಲ್ಲಿ ಇರುವುದಕ್ಕಿಂತ ಹೆಚ್ಚು ಭಿನ್ನವಾಗಿಲ್ಲ.

ವಿದ್ಯಾಭ್ಯಾಸ ಮತ್ತು ಕೌಶಲ

ಹಾಗಾಗಿ, ಭಾರತದಲ್ಲಿ ಯುವಜನರು ನೌಕರಿ ಗಳಿಸಲು ವಿಫಲರಾಗುವುದಕ್ಕೆ ಶಾಲಾ ಶಿಕ್ಷಣದಲ್ಲಿ ವೃತ್ತಿಕೌಶಲ ಸೇರ್ಪಡೆಯಾಗದಿರುವುದೇ ಕಾರಣ ಎಂಬ ಟೀಕೆಯು ಪ್ರಾಯೋಗಿಕವಾಗಿ ಸರಿಯಾದುದಲ್ಲ. ಭಾರತದಲ್ಲಿನ ನಿರುದ್ಯೋಗ ಸಮಸ್ಯೆಗೆ ಬೇರೆಯೇ ಕಾರಣವಿರಬಹುದು. ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅನೇಕ ಸಂಘಟನೆಗಳು ಸಮಾಜದಲ್ಲಿನ ಅಸಮಾನತೆ ಕುರಿತು ಕಳವಳ ವ್ಯಕ್ತಪಡಿಸಿದ್ದು, ಎಲ್ಲಾ ಮಕ್ಕಳಿಗೂ ಒಂದೇ ಬಗೆಯ ಶಿಕ್ಷಣ ಕೊಡುವಂತೆ ವಾದಿಸುತ್ತಾರೆ. ಶಾಲೆಗಳಲ್ಲಿ ಕೌಶಲಕ್ಕೋ ಅಥವಾ ಕೆಲಸಕ್ಕೋ ಆದ್ಯತೆ ಸಿಗುವುದಾದರೆ ಎಲ್ಲಾ ಮಕ್ಕಳಿಗೂ ಅವರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳನ್ನು ಲೆಕ್ಕಿಸದೆ ಅದು ಸಿಗುವಂತಾಗಬೇಕು ಎಂದು ಅವರು ವಾದಿಸುತ್ತಾರೆ. ಸಣ್ಣ, ಸಾಂಪ್ರದಾಯಿಕ ಉದ್ಯಮಗಳಲ್ಲಿ ತೊಡಗಿಸಿಕೊಂಡಿರುವ ಕುಟುಂಬಗಳ ಮಕ್ಕಳು ವಿದ್ಯಾಭ್ಯಾಸವನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳುತ್ತಿಲ್ಲ ಎಂಬ ಬಗ್ಗೆ ಕಳವಳ ಇದ್ದರೂ, ಆ ಮಕ್ಕಳನ್ನು ಶಾಲೆಗೆ ಕರೆತರುವ ನಿಟ್ಟಿನಲ್ಲಿ ಬೇರೆ ಮಾರ್ಗಗಳ ಬಗ್ಗೆಯೂ ಅವರು ಸಲಹೆ ನೀಡುತ್ತಾರೆ. ಕಡ್ಡಾಯ ಶಿಕ್ಷಣ ನೀತಿ ಅಥವಾ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಂಬಂಧ ಹೆತ್ತವರಿಗೆ ವಿಭಿನ್ನ ಬಗೆಯ ಬೆಂಬಲ ನೀಡುವುದೂ ಕಾರ್ಯತಂತ್ರದ ಒಂದು ಭಾಗವಾಗಿರುತ್ತದೆ.

ಪಾಠವನ್ನು ಬದುಕಿಗೆ ಜೋಡಿಸುವುದರ ಮಹತ್ವ

ಪ್ರತಿ ಮಗುವೂ ಕಲಿಯಬೇಕು ಎಂದು ನಾವು ಬಯಸುವುದಾದರೆ ತರಗತಿಯಲ್ಲಿ ನಡೆಯುವುದೆಲ್ಲವನ್ನೂ ಮಕ್ಕಳಿಗೆ ಕುತೂಹಲಕಾರಿ-

ಯಾಗಿಸಬೇಕು. ಬೋಧನಾ ಕಲೆಯನ್ನು ಬದಲಾಯಿಸುವುದು ಮತ್ತು ಶಿಕ್ಷಕರ ಇತರ ಅಭ್ಯಾಸಗಳಲ್ಲಿ ಮಾರ್ಪಾಡು ಮಾಡಿ ಪ್ರತಿಯೊಂದು ಮಗುವಿಗೂ ಶಾಲಾ ಶಿಕ್ಷಣವನ್ನು ಆಸಕ್ತಿದಾಯಕ-ವಾಗಿಸಬೇಕು.

ಅಮೂರ್ತತೆಗಳನ್ನು (ಪಠ್ಯಗಳಲ್ಲಿ) ವಾಸ್ತವದೊಂದಿಗೆ (ಮಕ್ಕಳ ಜೀವನ) ಜೋಡಿಸುವುದು ಮುಖ್ಯವಾಗಿದ್ದು, ಇದು ವಿಶ್ವ-ವಿದ್ಯಾಲಯದಲ್ಲಿ ಶಿಕ್ಷಣ ಪಡೆಯಲು ಬಯಸುವವರೂ ಸೇರಿದಂತೆ ಎಲ್ಲಾ ಮಕ್ಕಳಿಗೂ ಅತಿ ಮುಖ್ಯ. ವಾಸ್ತವದ ಬದುಕಿನೊಂದಿಗೆ ನಂಟೇ ಇಲ್ಲದಿರುವುದು ಕಾಲೇಜು ಮತ್ತು ವಿಶ್ವವಿದ್ಯಾಲಯದ ಶಿಕ್ಷಣದಲ್ಲಿಯೂ ಕಂಡುಬರುವ ಬಹಳ ದೊಡ್ಡ ಕೊರತೆ. ಇದೇನೂ ಕಲಿಕೆಯನ್ನು ಬಹಳ ಪ್ರಯೋಜನಕಾರಿಯಾಗಿ ಮಾಡುವುದಿಲ್ಲ. ಅಲ್ಲದೆ ಪದವಿಗಳು ಕೆಲವು ವರ್ಗದ ವಿದ್ಯಾರ್ಥಿಗಳಿಗೆ ಮಾತ್ರ ನೌಕರಿ ಗಳಿಸಲು ಸಹಾಯಕವಾಗುತ್ತದೆ.

ಹಾಗಿದ್ದರೆ ಸಾಂಪ್ರದಾಯಿಕ ಕೌಶಲಗಳ ಬಗ್ಗೆ ಏನು ಹೇಳೋಣ? ಕೈಗಾರಿಕೆ ಅಥವಾ ಆರ್ಥಿಕ ಪ್ರಗತಿಯ ದೆಸೆಯಿಂದ ಪಾರಂಪರಿಕ ವೃತ್ತಿಗಳನ್ನು ಜನರು ಸಾಮೂಹಿಕವಾಗಿ ಕೈಬಿಡುತ್ತಿದ್ದಾರೆ. ಕೃಷಿಯು ಜೀವನಾವಶ್ಯಕವಲ್ಲವೇ? ಆಧುನೀಕರಣ ಅಥವಾ ಅಭಿವೃದ್ಧಿಯ ಕಾರಣದಿಂದಾಗಿ ನಾವು ಪಾರಂಪರಿಕ ಕೌಶಲಗಳನ್ನು ಕಳೆದು-ಕೊಳ್ಳುತ್ತಿಲ್ಲವೇ? ಇವೆಲ್ಲವೂ ಸಕಾರಣವಾದ ಕಳವಳಗಳು.

ಇಲ್ಲಿ ಎರಡು ಪ್ರಮುಖ ಅಂಶಗಳಿವೆ- ಒಂದು, ಕೃಷಿ ಅಥವಾ ಕುಶಲಕರ್ಮಿಗಳ ಅಥವಾ ಪಾರಂಪರಿಕ ಕೌಶಲಗಳಲ್ಲಿ ತೊಡಗಿಸಿಕೊಂಡ ನಿಗದಿತ ಸಮಾಜೋ-ಆರ್ಥಿಕ ಗುಂಪು ಅಥವಾ ಜನರಿಗೆ ಕೆಲವು ಸಮಸ್ಯೆಗಳಿರಬಹುದಾದರೂ ಅವರು ಅಸ್ತಿತ್ವಕ್ಕಾಗಿಯಷ್ಟೇ ಈ ವೃತ್ತಿಗಳನ್ನು ಮುಂದುವರಿಸುತ್ತಿರಬಹುದು. ಕೃಷಿಕರ ಮಕ್ಕಳು ಕೃಷಿ ಕೆಲಸದಲ್ಲೇ ತೊಡಗಿಸಿಕೊಂಡರೆ ಮಾತ್ರ ಇದು ಸಫಲವಾದೀತು ಎನ್ನುವುದು ಅಪೇಕ್ಷಣೀಯ ನಿರೀಕ್ಷೆ ಅಲ್ಲ. ಎರಡನೆಯದಾಗಿ, ಕೃಷಿ ಮತ್ತು ಕುಶಲಕರ್ಮಿಗಳ ಕೌಶಲಗಳಂತಹ ಕೆಲವು ವೃತ್ತಿಗಳಿಂದ ಬರುವ ಆದಾಯ ಇಳಿಮುಖವಾಗಿದ್ದು ಸಮಾಜೋ-ಆರ್ಥಿಕ ಅಭಿವೃದ್ಧಿಯ ದೆಸೆಯಿಂದ ಅದು ಹಾಗೇ ಮುಂದುವರಿಯಬಹುದು. ಅಲ್ಲದೆ, ಇದೇ ವೃತ್ತಿಗಳನ್ನು ನಂಬಿಕೊಂಡು ಜೀವನ ನಡೆಸಬೇಕಾದರೆ ಅವುಗಳನ್ನು ಮೇಲೆತ್ತುವ ಸಂಬಂಧ ಗಮನ ಕೊಡಲೇಬೇಕು.

ಮುಖ್ಯವಾಹಿನಿ ಶಿಕ್ಷಣದಿಂದ ಪಾರಂಪರಿಕ ಕೌಶಲಕ್ಕೆ ಲಾಭ

ಈ ಸಂಬಂಧ ಎರಡು ಅನುಭವಗಳ ಮೇಲೆ ಬೆಳಕು ಚೆಲ್ಲುತ್ತೇನೆ. ಸ್ಥಳೀಯ ಗುಂಪುಗಳ ಪ್ರದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆ ಅಥವಾ ಕಾಲೇಜು ಶಿಕ್ಷಣವನ್ನು ಕಲಿತೂ ಪಾರಂಪರಿಕ ವೃತ್ತಿಗಳಲ್ಲಿ ತೊಡಗಿಸಿಕೊಂಡು ಭೂಮಿ, ಅರಣ್ಯ ಮತ್ತು ನದಿಯನ್ನು ಅವಲಂಬಿಸಿ ತಮ್ಮ ಜೀವನ ನಡೆಸುತ್ತಿದ್ದ ಕುಟುಂಬಗಳನ್ನು ನಾನು ಭೇಟಿಯಾದೆ. ಅಂತಹ ನೆಲೆಗಳಲ್ಲಿ ಮರಗೆಣಸಿನಂತಹ ಆಹಾರ, ನದಿ ಮೀನು ಮತ್ತು ಹಲವು ಬಗೆಯ ಹಣ್ಣುಗಳನ್ನು ಒಳಗೊಂಡಂತೆ ಸಾಕಷ್ಟು ಆಹಾರದ ಲಭ್ಯತೆಯ ಪ್ರಮಾಣದಿಂದಾಗಿ ಬದುಕು ದುರ್ಬಲವಾಗಿರುವುದಿಲ್ಲ ಮತ್ತು ಇದರಿಂದ ಈ ವಿದ್ಯಾವಂತ ಜನರು ಕೈಗಾರಿಕೆಗಳಲ್ಲಿ ನೌಕರಿ ಗಳಿಸಲು ಅಥವಾ ನಗರಗಳಿಗೋ/ ಪಟ್ಟಣಗಳಿಗೋ ಹೋಗಿ ಕೊಳೆಗೇರಿಗಳಲ್ಲಿ ವಾಸಿಸಲು ಇಷ್ಟಪಡುತ್ತಿಲ್ಲ. ಆದರೆ, ವಿದ್ಯಾಭ್ಯಾಸವು ಅನೇಕ ಕಾರಣಗಳಿಗೆ ಇವರಿಗೆ ಮುಖ್ಯವಾಗಿದೆ: ಹೊರಗಿನವರ ಹಠಾತ್ ಆಕ್ರಮಣ ತಡೆಯಲು, ತಮ್ಮ ಗಡಿಯನ್ನು ಕಾನೂನಾತ್ಮಕವಾಗಿ ರಕ್ಷಿಸಿಕೊಳ್ಳಲು, ತಮ್ಮ ಉತ್ಪನ್ನಗಳನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಮತ್ತು ಜಗತ್ತಿನ ವಿವಿಧ ಭಾಗಗಳ ಇತರರೊಂದಿಗೆ ಸಂಪರ್ಕ ಸಾಧಿಸಲು ಶಿಕ್ಷಣ ಮುಖ್ಯ ಎನ್ನುತ್ತಾರೆ.

ಇತ್ತೀಚೆಗೆ, ಪಂಜಾಬ್‌ನಲ್ಲಿ 'ಸುಶಿಕ್ಷಿತ ರೈತರ ಗುಂಪನ್ನು ನಾನು ಭೇಟಿಯಾದೆ. ಅವರಲ್ಲಿ ದೆಹಲಿಯಿಂದ ಹಿಂತಿರುಗಿದ್ದ ಸಾಫ್ಟ್‌ವೇರ್ ಇಂಜಿನಿಯರ್‌ಗಳೂ, ಓರ್ವ ಮಾಜಿ ಶಾಲಾ ಶಿಕ್ಷಕ ಹಾಗೂ ಅಮೆರಿಕದಿಂದ ವಾಪಸಾಗಿದ್ದ ವ್ಯಕ್ತಿ ಇದ್ದರು. ಅವರು, ರಾಸಾಯನಿಕ ಮುಕ್ತವಾದ ಸಾವಯವ ಕೃಷಿಯನ್ನು ಮಾಡುತ್ತಿದ್ದು, ತಾವು ಪಂಜಾಬ್‌ನ ಪಾರಂಪರಿಕ ಕೃಷಿ ಪದ್ಧತಿಯನ್ನು ಅವರು ಪುನಶ್ಚೇತನಗೊಳಿಸುತ್ತಿರುವುದಾಗಿ ಹೇಳಿದರು. ಔಪಚಾರಿಕ ಶಿಕ್ಷಣದಿಂದಾಗಿ ರಾಸಾಯನಿಕಗಳನ್ನು ಬಳಸದೆ, ಜಿಲ್ಲೆಯಾದ್ಯಂತ ಜಾಲ ವಿಸ್ತರಿಸಿ ಮತ್ತು ಆ ಜಾಲದ ನೆರವಿನಿಂದ ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವಂತಹ ಕೃಷಿಯ ಹೊಸಹೊಸ ಮಾರ್ಗಗಳನ್ನು ತಿಳಿದುಕೊಂಡಿದ್ದಾರೆ. ತಾವು ಮಾಡುತ್ತಿರುವ ಕೆಲಸಗಳ ಪ್ರಾಮುಖ್ಯತೆ ಬಗ್ಗೆ ಅವರು ಪ್ರಜ್ಞಾವಂತರಾಗಿದ್ದು, ನನ್ನಂತಹ ಹೊರಗಿನವರಿಗೆ ಆ ಬಗ್ಗೆ ವಿವರಿಸಲೂ ಸಮರ್ಥರಾಗಿದ್ದಾರೆ.

ಈ ಎರಡೂ ಪ್ರಕರಣಗಳಲ್ಲಿ-ಸ್ಥಳೀಯ ವಸಾಹತು ಮತ್ತು ಪಂಜಾಬ್‌ನ ಸುಶಿಕ್ಷಿತ ರೈತರು- ಸಾಂಪ್ರದಾಯಿಕ ಕೌಶಲ ಅಥವಾ ಜೀವನಶೈಲಿಯ ಅಭ್ಯಾಸವನ್ನು ಪುನರುಜ್ಜೀವನ-ಗೊಳಿಸಲಾಗುತ್ತಿದೆ. ಇಲ್ಲಿ ಔಪಚಾರಿಕ ಶಿಕ್ಷಣವು ಇಂತಹ ಕೌಶಲಗಳನ್ನು ಅರಿತುಕೊಳ್ಳಲು ಸಾಧನವಾಗಿದ್ದು, ಸಮಾಜದ ಮುಖ್ಯವಾಹಿನಿಯೊಂದಿಗೆ ವ್ಯವಹರಿಸಲು ಮತ್ತು ಇತರರೊಂದಿಗೆ ಅರ್ಥಪೂರ್ಣ ಚರ್ಚೆ ನಡೆಸಲು ಸಹಾಯಕವಾಗಿದೆ.

ಸಾರಾಂಶ

ಶಾಲಾ ಶಿಕ್ಷಣದಲ್ಲಿ ಕೌಶಲ್ಯಾಧಾರಿತ ಕಲಿಕೆಯ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸುವ ಮಂದಿಯ ಬಗ್ಗೆ ನನಗೆ ಅನುಕಂಪವಿದೆ. ಎಲ್ಲಾ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಮತ್ತು ಯಶಸ್ವಿಯಾಗಿ ವಿದ್ಯಾಭ್ಯಾಸ ಮುಗಿಸುವಲ್ಲಿ ಕೌಶಲಾಧಾರಿತ ಕಲಿಕೆಯ ಕೊರತೆಯೇ ಒಂದು ದೊಡ್ಡ ತೊಡಕಾಗಿದ್ದು, ಈ ನಿಟ್ಟಿನಲ್ಲಿ ಸಾಮಾಜಿಕ ಅಥವಾ ಆರ್ಥಿಕ ಏಳಿಗೆ ಕಂಡುಕೊಳ್ಳುವ ವೈಯಕ್ತಿಕ ಆಕಾಂಕ್ಷೆ ಅಥವಾ ಹೆಚ್ಚುತ್ತಿರುವ ಸಾಮಾಜಿಕ ಅಸಮಾನತೆ ಕುರಿತ ಸಮಾಜದ ಕಳವಳ - ಹೀಗೆ ಬೇರೆಬೇರೆ ಸಂಗತಿಗಳ ಬಗ್ಗೆ ಖಚಿತವಾದ ಪ್ರಯೋಗಗಳು ಪರಿಣಾಮಕಾರಿಯಾಗಿ ನಡೆಯಬೇಕು.

ಎಲ್ಲಕ್ಕಿಂತ ಹೆಚ್ಚಾಗಿ, ನಿಗದಿತ ವರ್ಷಗಳವರೆಗೆ ಸಾರ್ವತ್ರಿಕ ಶಿಕ್ಷಣ ಪಡೆಯುವ ಪ್ರತಿ ಮಗುವಿನಲ್ಲಿಯೂ ಪ್ರತಿಭೆ ಇರುತ್ತದೆ. ಭಾರತದಲ್ಲಿನ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಎದುರಿಸಲಾಗುತ್ತಿರುವ ಸಮಸ್ಯೆಗಳನ್ನು ತಪ್ಪಾಗಿ ಅಂದಾಜು ಮಾಡಿಕೊಂಡು ಈ ಮಾತನ್ನು ಹೇಳುತ್ತಿಲ್ಲ. ಶಾಲೆಗೆ ಹೋಗುವ ವಯಸ್ಸಿನವರಲ್ಲಿ ಅರ್ಧಕ್ಕಿಂತ ಹೆಚ್ಚಿನ ಮಕ್ಕಳು ಶಿಕ್ಷಣವನ್ನು ಪೂರ್ತಿಗೊಳಿಸುವುದೇ ಇಲ್ಲ, ಇಲ್ಲವೇ ಶಾಲೆಗೆ ಹೋದರೂ ಹೆಚ್ಚು ಕಲಿಯುವುದಿಲ್ಲ ಮತ್ತು ಶಿಕ್ಷಣ ಮುಗಿದ ಬಳಿಕ ಒಳ್ಳೆಯ ನೌಕರಿ ಪಡೆಯುವಲ್ಲಿ ವಿಫಲರಾಗುತ್ತಾರೆ. ಮತ್ತೊಂದು ಕಳವಳಕಾರಿ ಸಂಗತಿ ಎಂದರೆ, ಎಷ್ಟೋ ಹೆಣ್ಣು ಮಕ್ಕಳಿಗೆ ಸಂಬಳ ಪಡೆಯುವ ನೌಕರಿ ಸಿಗುವುದಿಲ್ಲ. ಇದಕ್ಕೆ ಬೇರೆಯೇ ಸಮಾಜೋ ಆರ್ಥಿಕ ಮತ್ತು ಸಾಂಸ್ಕೃತಿಕ ಕಾರಣಗಳಿರಬಹುದು. ಆದರೆ ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾಗ-ಬೇಕಿದೆ.



ವಿ. ಶಾಂತಕುಮಾರ್ ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. 1996–2011ರವರೆಗೆ ಅವರು ತಿರುವನಂತಪುರದ ಸೆಂಟರ್ ಫಾರ್ ಡೆವಲಪ್‌ಮೆಂಟ್ ಸ್ಟಡೀಸ್‌ನಲ್ಲಿ ಸೇವೆ ಸಲ್ಲಿಸಿದ್ದರು. ಪ್ರಸ್ತುತ ಅವರು, ಅಭಿವೃದ್ಧಿ ಮತ್ತು ಶಿಕ್ಷಣದ ನಡುವೆ ಸಂಪರ್ಕ ಏರ್ಪಡಿಸುವ, ಮತ್ತು ಜನಸಂಖ್ಯಾ ಗುಂಪುಗಳ ನಡುವಿನ 'ಅಂತರ'ವನ್ನು ಇಳಿಸಿ 'ಅಭಿವೃದ್ಧಿಯ ವ್ಯತ್ಯಾಸಗಳನ್ನೂ' ಕಡಿಮೆ ಮಾಡುವ ಸಂಬಂಧ ಕೆಲಸ ಮಾಡುತ್ತಿದ್ದಾರೆ. ಶಾಂತಕುಮಾರ್ ಅವರು ಪ್ರಾದೇಶಿಕ ಹಾಗೂ ಜಾಗತಿಕ ಸಮಸ್ಯೆಗಳ ಕುರಿತ ಅನೇಕ ಕನ್ಸಲ್ಟೆಂಟ್ ಅಥವಾ ಸಲಹೆಗಾರರ ಕಾರ್ಯನಿಯೋಜನೆಗಳು ಮತ್ತು ಸಂಶೋಧನಾ ಯೋಜನೆಗಳಲ್ಲಿ ದುಡಿದಿದ್ದಾರೆ. ಅವರ ಸಂಪರ್ಕಕ್ಕೆ: santhakumar@apu.edu.in

ಅನುವಾದ: **ರೋಹಿಣಿ ಮುಂಡಾಜೆ** । ಪರಿಶೀಲನೆ: **ಲತಾ ಕೆ ಸಿ**